# ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರ ಕ್ಷೇತ್ರ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1195 (1355)
ಉತ್ತರಿಸುವ ದಿನಾಂಕ : 18.03.2020
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಹೊಸ ಭೂಸ್ವಾಧೀನ ಕಾಯ್ದೆ ಅನ್ವಯ ಸಾಮಾಜಿಕ ಪರಿಣಾಮ ಮೌಲ್ಯಮಾಪನ (S.I.A) ವನ್ನು ಯಾವ ಯಾವ ಭೂಸ್ವಾಧೀನ ಜಮೀನುಗಳಿಗೆ ಅನ್ವಯಿಸಲಾಗಿದೆ; ಇದರಿಂದ ಯಾವ ಯಾವ ಭೂಸ್ವಾಧೀನ ಜಮೀನುಗಳು ಹೊರತಾಗಿರುತ್ತವೆ; (ವಿವರವಾದ ಮಾಹಿತಿ ನೀಡುವುದು) | ಭೂಸ್ವಾಧೀನ ಕಾಯ್ದೆ 2013ರ ಕಲಂ 4 (ಅಧ್ಯಾಯ-2) ರನ್ವಯ ಸಮುಚಿತ ಸರ್ಕಾರವು ಸಾರ್ವಜನಿಕ ಉದ್ದೇಶಕ್ಕಾಗಿ ಭೂಮಿಯನ್ನು ಅರ್ಜಿಸಲು ಉದ್ದೇಶಿಸಿದಾಗ ಸಾಮಾಜಿಕ ಪರಿಣಾಮ ನಿರ್ಧರಣಾ ಅಧ್ಯಯನವನ್ನು ಕೈಗೊಳ್ಳುವುದು ಕಡ್ಡಾಯವಾಗಿರುತ್ತದೆ.<br>ಆದರೆ ಈ ಕಾಯ್ದೆಯ ಕಲಂ 6(2)ರ ಪರಂತುಕದಂತೆ ಪರಿಸರ ಪ್ರಭಾವ ನಿರ್ಧರಣಾ ಕಾರ್ಯಗತಿಯನ್ನು ಅಗತ್ಯ ಪಡಿಸಿರುವ ನೀರಾವರಿ ಯೋಜನೆಗಳಿಗೆ ಸಾಮಾಜಿಕ ಪರಿಣಾಮ ನಿರ್ಧರಣಾ ಅಧ್ಯಯನ ಅನ್ವಯಿಸತಕ್ಕದಲ್ಲವೆಂದು ನಿಗದಿಪಡಿಸಲಾಗಿದೆ.<br>ಈ ಕಾಯ್ದೆಯ ಕಲಂ-9ರನ್ವಯ ಕಲಂ 40ರ ಮೇರೆಗೆ ಜರೂರು ಉಪಬಂಧಗಳ ಸಹಾಯದಿಂದ ಭೂಮಿಯನ್ನು ಅರ್ಜಿಸಲು ಉದ್ದೇಶಿಸಿರುವ ರಾಷ್ಟ್ರೀಯ ಭದ್ರತೆ ಅಥವಾ ನೈಸರ್ಗಿಕ ವಿಪತ್ತುಗಳು ಅಥವಾ ಇತರೆ ಯಾವುದೇ ತುರ್ತು ಪರಿಸ್ಥಿತಿಯಿಂದ ಉಂಟಾಗುವ ಸಂದರ್ಭಗಳಲ್ಲಿ ಕೈಗೊಳ್ಳುವ ಭೂಸ್ವಾಧೀನ ಪ್ರಕ್ರಿಯೆಗೆ ಸಾಮಾಜಿಕ ಪರಿಣಾಮ ನಿರ್ಧರಣಾ ಅಧ್ಯಯನದಿಂದ ವಿನಾಯಿತಿ ಇರುತ್ತದೆ.<br>ಇದಲ್ಲದೆ, ಇತ್ತೀಚೆಗೆ ರಾಜ್ಯ ಸರ್ಕಾರವು 2013ರ ಕಾಯ್ದೆಗೆ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 03 ಶಾಸನ 2019, ದಿನಾಂಕ: 23-07-2019 ರಲ್ಲಿ ತಿದ್ದುಪಡಿ ಹೊರಡಿಸಿ ಅಧ್ಯಾಯ III-A ಅನ್ನು ಸೇರ್ಪಡೆಗೊಳಿಸಿದ್ದು, ಅದರಲ್ಲಿ ರಾಜ್ಯ ಸರ್ಕಾರವು ಸಾಮಾಜಿಕ ಪರಿಣಾಮ ನಿರ್ಧರಣಾ ಅಧ್ಯಯನದಿಂದ ವಿನಾಯಿತಿ ನೀಡಬಹುದಾದ ಯೋಜನೆಗಳನ್ನು ಸೇರ್ಪಡೆಗೊಳಿಸಿದೆ. ಇದರನ್ವಯ ರಾಷ್ಟ್ರೀಯ ಭದ್ರತೆ ಅಥವಾ ರಕ್ಷಣಾ ಇಲಾಖೆಯ ಯೋಜನೆಗಳು, ಹಾಗೂ ಮೂಲಭೂತ ಸೌಕರ್ಯವನ್ನೊಳಗೊಂಡ ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಸರ್ಕಾರಿ ಅಥವಾ ಸ್ಥಳೀಯ ಸಂಸ್ಥೆಗಳ ಕಚೇರಿಗಳು, ವಿದ್ಯುದೀಕರಣ, ನೀರಾವರಿ ಯೋಜನೆಗಳು, ಕುಡಿಯುವ ನೀರಿನ ಯೋಜನೆಗಳು ಮತ್ತು ಕೈಗೆಟುಗುವ ದರದಲ್ಲಿ ವಸತಿ ಮತ್ತು ಬಡವರಿಗಾಗಿ ವಸತಿ, ಕೈಗಾರಿಕೆ ಕಾರಿಡಾರ್‌ಗಳು (ರೈಲ್ವೇ ಮಾರ್ಗ/ರಸ್ತೆಗಳು) ಮತ್ತು ಖಾಸಗಿ ಹಾಗೂ ಸಾರ್ವಜನಿಕ ಸಹಭಾಗಿತ್ವದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದಂತಹ ಯೋಜನೆಗಳಿಗೆ ವಿನಾಯಿತಿ ನೀಡಲು ಅವಕಾಶ ಕಲ್ಪಿಸಲಾಗಿದೆ. |
| (ಆ) | ರಾಜ್ಯದಲ್ಲಿ (S.I.A) ಯನ್ನು ಕಾರ್ಯಗತಗೊಳಿಸಲು ನೋಂದಾವಣಿ ಆದ ಎನ್.ಜಿ.ಓಗಳ ಸಂಖ್ಯೆ ಎಷ್ಟು; ವಿಳಾಸದೊಂದಿಗೆ ಮಾಹಿತಿ ನೀಡುವುದು; | ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 01 ಸಿಆರ್‌ಆರ್ 2015 ದಿನಾಂಕ: 08-10-2015 ಮತ್ತು ದಿನಾಂಕ: 28-10-2015 ಹಾಗೂ ಅಧಿಸೂಚನೆ ಸಂಖ್ಯೆ ಕಂಇ 121 ಆರ್‌ಇಹೆಚ್ 2016, ದಿನಾಂಕ:01-12-2016ರಲ್ಲಿ ಭೂಸ್ವಾಧೀನ ಕಾಯ್ದೆ 2013ರನ್ವಯ ಭೂಸ್ವಾಧೀನ ಪ್ರಕರಣಗಳಲ್ಲಿ ಸಾಮಾಜಿಕ ಪರಿಣಾಮ ನಿರ್ಧರಣಾ ಅಧ್ಯಯನ ಕೈಗೊಳ್ಳಲು ವಿಭಾಗವಾರು ಒಟ್ಟು 48 ಏಜೆನ್ಸಿ/ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ ಎಂಪ್ಯಾನಲ್‌ಮೆಂಟ್ ಮಾಡಲಾಗಿದೆ ಇವುಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| (ಇ) | ಪರಿಸರ ಪರಿಣಾಮ ಮೌಲ್ಯಮಾಪನ (E.I.A) ಅಧ್ಯಯನ ಎಂದರೇನು; ಯಾವ ಯಾವ ಭೂಸ್ವಾಧೀನ ಜಮೀನುಗಳಿಗೆ ಅನ್ವಯಿಸಲಾಗಿದೆ; ಇದರಿಂದ ಯಾವ ಯಾವ ಭೂಸ್ವಾಧೀನ ಜಮೀನುಗಳು ಹೊರತಾಗಿರುತ್ತವೆ; (ವಿವರವಾದ ಮಾಹಿತಿ ನೀಡುವುದು) | ಭೂಸ್ವಾಧೀನ ಕಾಯ್ದೆ 2013ರಲ್ಲಿ ಪರಿಸರ ಪರಿಣಾಮ ಮೌಲ್ಯಮಾಪನ ಅಧ್ಯಯನ ಕೈಗೊಳ್ಳುವ ಬಗ್ಗೆ ಉಪಬಂಧಗಳು ಇರುವುದಿಲ್ಲ.<br>ಮುಂದುವರೆದು, ಪರಿಸರ ಪರಿಣಾಮ ಮೌಲ್ಯಮಾಪನ ಅಧ್ಯಯನವು ಯಾವುದೇ ಯೋಜನೆ, ನೀತಿ ಕಾರ್ಯಕ್ರಮ ಅಥವಾ ನಿರ್ದಿಷ್ಟ ಚಟುವಟಿಕೆಯಿಂದ ಉಂಟಾಗಬಹುದಾದ ಧನಾತ್ಮಕ ಅಥವಾ ಋಣಾತ್ಮಕ ಪರಿಣಾಮಗಳ ಬಗ್ಗೆ ಅವುಗಳ ಅನುಷ್ಠಾನಕ್ಕೆ ಮೊದಲು ಮುನ್ಸೂಚನೆ ನೀಡುವ ಒಂದು ವಿಧಿಬದ್ಧ ಪ್ರಕ್ರಿಯೆಯಾಗಿರುತ್ತದೆ. ಪ್ರಸ್ತುತ ಪರಿಸರ ಪರಿಣಾಮ ಮೌಲ್ಯಮಾಪನವನ್ನು ಕೇಂದ್ರ ಸರ್ಕಾರದ ಪರಿಸರ (ಸಂರಕ್ಷಣಾ) ಕಾಯ್ದೆ, |

| | | |
|---|---|---|
| | | 1986ರ ಅಡಿಯಲ್ಲಿ ಹೊರಡಿಸಲಾಗಿರುವ ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆ, 2006ರಲ್ಲಿ ನಿಗದಿಪಡಿಸಿರುವ ವಿಧಿ, ವಿಧಾನಗಳನ್ನು ಅನುಸರಿಸಿ ನಡೆಸಲಾಗುತ್ತದೆ. ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆ, 2006ರ ಅನುಸಾರ ಸದರಿ ಅಧಿಸೂಚನೆಯಲ್ಲಿ ಪಟ್ಟಿ ಮಾಡಲ್ಪಟ್ಟಿರುವ ಮತ್ತು ಪರಿಸರ ಪರಿಣಾಮ ಮೌಲ್ಯಮಾಪನದ ಅಗತ್ಯತೆಯಿರುವ ಎ ವರ್ಗದ ಹಾಗೂ ಬಿ1 ವರ್ಗದ ಯೋಜನೆ ಮತ್ತು ಚಟುವಟಿಕೆಗಳಿಗೆ ಮಾತ್ರ ಪರಿಸರ ವಿಮೋಚನಾ ಪತ್ರ ನೀಡುವ ಮೊದಲು ಇಂತಹ ಅಧ್ಯಯನವನ್ನು ಕೈಗೊಳ್ಳಲಾಗುತ್ತಿದೆ. ಇವುಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಸೇರಿರುವುದಿಲ್ಲ. |
| (ಈ) | ರಾಜ್ಯದಲ್ಲಿ (E.I.A) ಕಾರ್ಯಗತಗೊಳಿಸಲು ನೋಂದಾವಣೆ ಆದ ಎನ್.ಜಿ.ಓಗಳ ಸಂಖ್ಯೆ ಎಷ್ಟು; (ವಿಳಾಸದೊಂದಿಗೆ ಮಾಹಿತಿ ನೀಡುವುದು) | ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆಯ ಅಡಿಯಲ್ಲಿ ಕೈಗೊಳ್ಳಲಾಗುವ ಪರಿಸರ ಪರಿಣಾಮ ಮೌಲ್ಯಮಾಪನ ಅಧ್ಯಯನವನ್ನು ಕೇಂದ್ರ ಸರ್ಕಾರದ ಭಾರತೀಯ ಕ್ವಾಲಿಟಿ ಪರಿಷತ್ (QCI) ಗೆ ಒಳಪಟ್ಟ NABET ಸಂಸ್ಥೆ ವತಿಯಿಂದ ಮಾನ್ಯತೆ ಪಡೆದ ಸಂಸ್ಥೆಗಳ ಮೂಲಕ ನಡೆಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಎನ್.ಜಿ.ಓ ಗಳ ನೊಂದಾವಣೆ ಇರುವುದಿಲ್ಲ. |
| (ಉ) | ಕಳೆದ 3 ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಈ 2 ಮೌಲ್ಯಮಾಪನಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; ಇವುಗಳನ್ನು ಯಾವ ಎನ್.ಜಿ.ಓ ಗಳಿಗೆ ಬಿಡುಗಡೆ ಮಾಡಲಾಗಿದೆ? | ಈ ಎರಡು ಮೌಲ್ಯಮಾಪನಗಳಿಗೆ ತಗುಲುವ ವೆಚ್ಚವನ್ನು ಭೂಕೋರಿಕೆ ಸಂಸ್ಥೆಗಳು ಠೇವಣಿ ಇರಿಸುವ ಮೊತ್ತದಿಂದ ಸಂಬಂಧಿಸಿದ ಏಜೆನ್ಸಿಗಳಿಗೆ ಪಾವತಿಸಲಾಗುತ್ತದೆ. ಈ ಮೌಲ್ಯಮಾಪನ ಕಾರ್ಯಗಳಿಗೆ ಸರ್ಕಾರದಿಂದ ಪ್ರತ್ಯೇಕವಾಗಿ ಯಾವುದೇ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ. |

ಸಂಖ್ಯೆ: ಕಂಇ: 02 ಸಿಆರ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

## -ಅನುಬಂಧ -

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1355

ರಾಜ್ಯದಲ್ಲಿ ಸಾರ್ವಜನಿಕ ಉದ್ದೇಶಕ್ಕೆ ಕೈಗೊಳ್ಳಲಾಗಿರುವ ಭೂಸ್ವಾಧೀನ ಪ್ರಕರಣಗಳಲ್ಲಿ ಸಾಮಾಜಿಕ ಪರಿಣಾಮ ನಿರ್ಧರಣಾ ಅಧ್ಯಯನವನ್ನು ಕೈಗೊಳ್ಳಲು ಎಂಪ್ಯಾನಲ್‌ಮೆಂಟ್ ಮಾಡಲಾಗಿರುವ ಬೆಂಗಳೂರು, ಮೈಸೂರು, ಬೆಳಗಾವಿ & ಕಲಬುರಗಿ ವಿಭಾಗಗಳಿಗೆ ಸಂಬಂಧಿಸಿದ ಏಜೆನ್ಸಿ / ಸಂಪನ್ಮೂಲ ವ್ಯಕ್ತಿಗಳ ವಿವರಗಳು ಈ ಕೆಳಗಿನಂತಿವೆ.

| Sl No | Name of the Personal/Organization | Address |
|---|---|---|
| 1 | A2 Z Solution Services | Jayanagara Bengaluru-560011<br>A2zp2015@gmail.com<br>8041566422 |
| 2 | Dr.Rajakumar Poojari | Hanumantha Nagaara,Bengaluru,<br>Dr.rajkumar p@yahoo.co,<br>9449649042 |
| 3 | Institute for Social and Economic Change, Dr.Manohar Yadav, Professor, And Head Center for Study of Social Change and Development | Dr.V.K.R.V. Road, Nagarabhavi, Bengaluru-560072<br>Director@isee.ac.in<br>91-80-23217010<br>080-23180494 |
| 4 | Interfece India Development Consultant | Lakkasandra, Bengaluru-30<br>interfaceindiaconsultant@gmail.com<br>9845704574 |
| 5 | Sri.Sudharana Rural Development Organisation ® | Banashankari 1st Stage H.Block,<br>Srinivas Nagar, Bengfaluru<br>ssrdo@rediffmail.com<br>9449012527 |
| 6 | Expression of Interest for Empanelment of Agencies for Social Impact Assessment Studies | ARKITECHNO Consultants (India) Pvt.Ltd.,<br>World Trade Centre Bengaluru, Malleshwaram, Bengaluru.<br>businesss@arkitechno.com<br>9449009082 |
| 7 | Consultancy/Agency Lead ® | Raitha Bhavan Office-09,<br>APMC Yard, Vinabanagara, Shivamogga-597204<br>Leadsmg5@gmail.com<br>9900256084 |
| 8 | Eshwarappa.C | LIG 421, F Block, Kallahalli, Vinobanagara, Shivamogga-577204<br>Kutumba99@gmail.com<br>8867976271 |
| 9 | Technical Consultancy Services Organisation of Karnataka | 4th Floor, Basava Bhavan, Basav eshwara Circle, Bengaluru-560001<br>Tecsok1@airtelmail.in<br>080-22260134 |

| | | |
|---|---|---|
| 10 | Dr.N.R.Gangadharappa, Professor and Head University of Agricultural Science, G.K.V.K | Prof.And Head, Department of Agricultural Extension G.K.V.K.Bengaluru-560065<br>Drganga@gmail.com<br>9449863659 |
| 11 | Dr. R.Rajesh.Ph.D., | Prof.Department of Sociology, Bengaluru University, Jnana Bharathi Campus, Bengaluru-560056.<br>Rajeshrr@hotmail.com<br>9844161300 |
| 12 | Dr.P.Venkataramana | B-2, M.B.A. Quarters, Siddaganga Institute of Technology Campus, B.H.RoaD, Tumkur-572103<br>Panchvenkat.panchadi6@gmail.com |
| 13 | Dr.Rajkumara Pujari | #574/27/1, 6th Main, 3rd Cross, BSK 1st Stage, (2nd Block), Hanumanthanagar, Bengaluru-560050.<br>9449649042<br>Dr.rajkumarp@yahoo.com |
| 14 | K.Venkatesh,<br>General Secretary (Rural Community Science Center Trust ® | Shedthikere Village, Varadamoola.Post, Shimoga District, Karnataka<br>08183-221424<br>rcಸಿಡಿvjnan@gmail.com |
| 15 | V.M.Hegde,<br>Managing Director | Centre for Symbiosis of Technology Environment and Management (STEM)<br>BDA Complex, Koramangala, Bengaluru-560034<br>080-25537664<br>stemb@vsnl.com |
| 16 | Shivakumar.K, | Sasavihalli, Harappana Halli Taluk, Davanagere Dist-583127<br>Ksismith53@gmail.com<br>9986532839 |
| 17 | Madhusudan Hanumappa,<br>Social Development Consultant | Malaviya Nagar, New Delhi. |
| 18 | Satra Infrastructure Management Services Pvt.Ltd., | 605, Ashoka Bhoopal Chambers, S.P.Road, Begumpet, Secunderabad, Telangana India-500003<br>business@satragroup.in<br>91.40.2784.0050 |
| 19 | Bijapur Integrated Rural Development Society ® (BIRDS) | Hunagund, Bagalkote,<br>Birdshungud1990@rediffmail.com<br>9448117058 |
| 20 | Sinchana Rural & Urban Development Organisation ® | Mulugunda Naka,<br>Gadaga-582103<br>9844175299 |

| | | |
|---|---|---|
| 21 | Ramesh.P Bhairaji | Deputy Commissioner Office,<br>District Urban Development Cell, UPAC,<br>Belgavi-590019<br>Ramesh.kuidfc@gmail.com<br>9902597783 |
| 22 | Shabeer Ahmed Ronad | Dr.N.A.Ronad ITI Street, Naregal Post,<br>Nargal Tq.RON Dist:Gadaga<br>Pin-582119<br>Shabeerngl@rediffmail.com<br>7795291346 |
| 23 | Dr.Shivananda Gubbannavar | "Shanthiniketha na"<br>Kalyananagara 5th Cross, Dharwada-580007<br>9980642564 |
| 24 | H.C.Boregowda | No.395/1A, 2nd Cross, Marigowda Layout,<br>Mandya-571401.<br>sanjushree@rediffmail.com<br>9448716411 |
| 25 | Mrs.Roopa.S | Panemangalore Post, Banthwala Taluk, D.K.<br>Pin-574231<br>9483516096<br>Roopamswphilamena@gmail.com |
| 26 | Mallikarjun | Centre for Environment & Sustainable Growth,<br>#796, 1st 'A' Main, 7th Block, 2nd Phase, BSK<br>3rd Stage, Bangalore-560085<br>Cesgblr@gmail.com |
| 27 | Mahadevaiah | No.19, Rekha Residency Flat No.403,<br>Sriramanagar,Ittamadu, BSK 3rd Stage,<br>Bangalore-560085<br>9663664028<br>treedbng@gmail.com |
| 28 | Dr,Lalitha Bhaskar | M/s. Enviroment Health and Safety Consultants<br>Pvt.Ltd.,<br>No.13/213, Main Road, Near Fire Station,<br>Industrial Town, Rajajinagara, Bengaluru<br>ehscmlr@gmail.com |
| 29 | Venkatesh Nagappa | Lingasaguru, Raichur District<br>Vnbulla123@gmail.com<br>9916890280 |
| 30 | Chidananda D Karalakunti | Sarjapur, Lingasaguru Taluk, Raichur District-<br>584122<br>cdkuppigudda@yahoo.com<br>9481131963. |
| 31 | Mahaboob Ali | Nijalingappa Colony, Raichur<br>mahibub.lng@gmail.com<br>9916883164 |

| | | |
|---|---|---|
| 32 | Samaj Vikas Development Support Organisation | Sri.Laxmi Plaza, Jafar Ali Bagh, Somajiguda, Hyderabad,<br>9341362272<br>info@samajvikas.org |
| 33 | Centre For Management and Social Research | Srinagara Colony<br>Hyderabad-500073<br>cmarindia@yahoo.co.in<br>040-666870 |
| 34 | Pan India Network | 10-2-152, Bank Colony Sangameshwar Nagara, Gulbarga.<br>Pin.glb@live.com<br>9448333550 |
| 35 | Dr.K.Suman Chandra<br>Professor & Head | National Institute of Rural Development, Rajendranagar, Hydrabad-500030<br>040-24008515<br>040-40020314<br>9848997643<br>sum@nird.gov.in |
| 36 | Sathish Chandra | 36/1, 3rd Cross, Maruthi Nagara, Vrushabhavathi Nagara, Near New St.Mary's School, Sannakki Bhavalu,<br>Bengaluru<br>satishkmtk@gmail.com<br>9449859129 |
| 37 | AMS Consultants Research Training (Academy of Management Studies) | 15, Laxmanpuri, Faizabad Road,<br>Lucknow-226016<br>E-mail-ams@amsindia.org |
| 38 | NEZ Infratech Pvt Ltd., | No.1,2nd Floor, P.Veerappa Arcade, Ittmadu Main Road, Arehalli, Bengaluru-560061.<br>Email-infor#nezpl.com<br>Mobile No.9945215565 |
| 39 | Madhusudan Hanumappa | Abnaki Infrastructure Applications and Integrated Development Private limited.<br>JG-11, Near Krishna Mandir Khirki Extension, Malavijanagara, New Delhi-110017.<br>info@abnaki.in<br>9810244788 |
| 40 | Ramky Envire Engineers Ltd | Ramky House, Site No.25, 30, 2nd Cross, Raghavendra Nagar, Hennur Ring Road, Kalyananagar (Post), Bengaluru.<br>E-mail-drehakradhar@ramky.com<br>9000604455 |
| 41 | Dr.Harish | # 420, 4th Main, 4th Stage, T.K.Layout, Mysore-570005<br>9740661428<br>Email-amoghait@gmail.com |
| 42 | Dr.Thippaiah | H.No.15/2, Lakshmi Nilaya, 1st 'A' Main, 3rd 'B' Cross, Nanjappa Layout,<br>Doddabommasandra, Bengaluru-97. |

| | | |
|---|---|---|
| 43 | 'Sahara (IT & ITES) | #1024, 1st Floor, 7th Cross, Sampige Road, K.R.Puram, Hassan-573201. E-mail-ramyamanjunath55@gmail.com 8762388848 |
| 44 | Krishna Dutt Kalaskar | No.7, ground floor, 6th Cross, Malleshwaram, Bengaluru-560003. |
| 45 | G.G.V. Education And Rural Development Society & G.G.V Enterprises, Tumkur | Yallapura Arakere Post, Tumkur Taluk, Tumkur District. |
| 46 | Centre for Science and Enviornment | Tughlakabad Institutional Area, New Delhi-110062. |
| 47 | M/S.RITES<br>The Infrastructure People a Government of India Enterprises. | M/s.RITES Ltd.,<br>No.44/1,High grounds,<br>Sampangiramanagar,<br>Bengaluru. |
| 48 | Hydrabad Karnataka Centre for Advanced Learning. | HKCAL @ WS,<br>No.68/14, 1st Main Road, Near Fortis Hospital,<br>Opp:Indian Bank, Sheshadripuram,<br>Bengaluru-560020, Karnataka<br>Hkcglb966@rediffmail.com |

16/03/2020
(ಎಸ್.ಸುರೇಶ್ ಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ-2
ಕಂದಾಯ ಇಲಾಖೆ
(ಪುನರ್ವಸತಿ ಮತ್ತು ಪುನರ್‌ನಿರ್ಮಾಣ)
16/3/2020